International Journal of Kannada Research
www.kannadajournal.com

ISSN: 2454–5813
IJKR 2022; 8(2): 73-74
© 2022 IJKR
www.kannadajournal.com
Received: 01-02-2022
Accepted: 03-03-2022

**ನಾಗಲಿಂಗ ತಿ. ಮುರಗಿ**
ಸಂಶೋಧನಾ ವಿದ್ಯಾರ್ಥಿ,
ಸಂಗೀತ ವಿಭಾಗ,
ಧಾರವಾಡ, ಕರ್ನಾಟಕ,
ಭಾರತ

**ಡಾ. ಶಾಂತಾರಾಮ ಹೆಗಡೆ**
ಲಲಿತಕ¯Á ಮತ್ತು ಸಂಗೀತ
ಕಾಲೇಜು, ಧಾರವಾಡ,
ಕರ್ನಾಟಕ, ಭಾರತ

**Corresponding Author:**
**ನಾಗಲಿಂಗ ತಿ. ಮುರಗಿ**
ಸಂಶೋಧನಾ ವಿದ್ಯಾರ್ಥಿ,
ಸಂಗೀತ ವಿಭಾಗ, ಧಾರವಾಡ,
ಕರ್ನಾಟಕ, ಭಾರತ

# ಧಾರವಾಡ ಜಿಲ್ಲೆಯ ತಬಲಾ ಕಲಾವಿದರು

**ನಾಗಲಿಂಗ ತಿ. ಮುರಗಿ, ಡಾ. ಶಾಂತಾರಾಮ ಹೆಗಡೆ**

## ಪರಿಚಯ

ಭಾರತೀಯ ಸಂಸ್ಕೃತಿಯಲ್ಲಿ ಕರ್ನಾಟಕವು ಸಾಹಿತ್ಯ, ಸಂಗೀತ, ನೃತ್ಯ, ಶಿಲ್ಪ, ಚಿತ್ರಕಲೆ ಹೀಗೆ ಅನೇಕ ರೀತಿಯಿಂದ ಪ್ರಸಿದ್ಧಿಯನ್ನು ಪಡೆದ ರಾಜ್ಯವಾಗಿದೆ. ಅದರಲ್ಲಿ ವಿಶೇಷವಾಗಿ ಸಂಗೀತ ಕ್ಷೇತ್ರಕ್ಕೆ ಧಾರವಾಡ ಜಿಲ್ಲೆಯ ಕೊಡುಗೆ ಗಣನೀಯವಾದದು.

ಧಾರವಾಡ ಜಿಲ್ಲೆಯಲ್ಲಿ ಮೊದಲು ಕರ್ನಾಟಕೀ ಸಂಗೀತದ ಪ್ರಚಾರವಿತ್ತು. ಏಕೆಂದರೆ ವಿಜಯನಗರದ ಸಾಮ್ರಾಜ ಧಾರವಾಡದವರೆಗೂ ವಿಸ್ತರಿಸಿದ್ದರಿಂದ ದಾಸರ ಹಾಡುಗಳ ಮೂಲಕ ಕರ್ನಾಟಕೀ ಸಂಗೀತ ಜನಸಾಮಾನ್ಯರಲ್ಲಿ ಮನೆಮಾತಾಗಿತ್ತು. ವಿದೂಷಿ ಶ್ರೀಮತಿ ಗಂಗೂಬಾಯಿ ಹಾನಗಲ್ಲ ಅವರ ತಾಯಿ ಅಂಬಾಬಾಯಿ ಅವರು ಕೂಡಾ ಕರ್ನಾಟಕೀ ಸಂಗೀತವನ್ನು ಹಾಡುತ್ತಿದ್ದರು. ಮುಂದೆ ಇವರು ತಮ್ಮ ಮಗಳಿಗೆ ಪಂ. ಸವಾಯಿ ಗಂಧರ್ವರಿಂದ ಹಿಂದೂಸ್ತಾನಿ ಸಂಗೀತವನ್ನು ಕಲಿಸುತ್ತಾರೆ.

1865 ನೇ ಇಸ್ವಿಯಲ್ಲಿ ಪಂ. ಭಾಸ್ಕರಬುವಾ ಬಖಲೆಯವರು ಧಾರವಾಡದ ಟ್ರೇನಿಂಗ್ ಕಾಲೇಜನಲ್ಲಿ ಸಂಗೀತ ಪ್ರಾಧ್ಯಾಪಕರಾಗಿ ಸುಮಾರು ಏಳೆಂಟು ವರ್ಷಗಳ ಕಾಲ ಸೇವೆ ಸಲ್ಲಿಸುತ್ತಾರೆ. ಇವರ ಸ್ನೇಹಿತರಾದ ಹಾಗೂ ವಕೀಲರಾದ ಶ್ರೀ ಕಾಶಿನಾಥ ಪೀತ್ರೆ ಇವರಿಬ್ಬರು ಅಂದಿನ ಯುವ ಪೀಳಿಗೆಗೆ ಹಿಂದೂಸ್ತಾನಿ ಸಂಗೀತವನ್ನು ಕಲಿಸುತ್ತಿದ್ದರು. ಹಾಗೇ ಹಿಂದೂಸ್ತಾನಿ ಸಂಗೀತದ ಬಗ್ಗೆ ಜನರಲ್ಲಿ ಆಸಕ್ತಿಯನ್ನು ಮೂಡಿಸುತ್ತಿದ್ದರು. ಅಲ್ಲದೆ ಧಾರವಾಡದಲ್ಲಿ ಶ್ರೇಷ್ಠ ಹಿಂದೂಸ್ತಾನಿ ಸಂಗೀತಗಾರರನ್ನು ಕರೆಯಿಸಿ ತಮ್ಮ ಮನೆಯಲ್ಲಿಯೆ ಅವರಿಗೆ ವಾಸ್ತವ್ಯ ಕಲ್ಪಿಸಿ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು. ಧಾರವಾಡದಲ್ಲಿ ಹಿಂದೂಸ್ತಾನಿ ಸಂಗೀತ ಬೆಳೆಯಲು ಸಿದ್ಧಾರೂಢ ಮಠವು ಕಾರಣವಾಗುತ್ತದೆ. ಏಕೆಂದರೆ ಹುಬ್ಬಳ್ಳಿ ಸಿದ್ಧಾರೂಢರ ಶಿಷ್ಯರಾದ ಸಂತ ಕಬೀರದಾಸರು ಜ್ಞಾನಿಗಳು ಹಾಗೂ ಸಂಗೀತ ವಿದ್ವಂಸರಾಗಿದ್ದರು. ಹಾಗಾಗಿ ಉತ್ತರಭಾರತದ ಸಂಗೀತಗಾರರೆಲ್ಲ ಮಠಕ್ಕೆ ಬಂದು ತಮ್ಮ ಸಂಗೀತ ಸೇವೆಯನ್ನು ಮಾಡುತ್ತಿದ್ದರು.

ಸಿತಾರರತ್ನ ರಹೇಮತ್ ಖಾನರು 1912 ನೇ ಇಸ್ವಿಯಲ್ಲಿ ಧಾರವಾಡ ಶಹರದಲ್ಲಿ ಬಂದು ನೆಲೆಸುತ್ತಾರೆ. ಇವರು ಭಾರತೀಯ ಸಂಗೀತ ವಿದ್ಯಾಲಯವನ್ನು ಸ್ಥಾಪಿಸಿ ಭಾರತದ ಶ್ರೇಷ್ಠ ಸಂಗೀತಗಾರರನ್ನು ಆಹ್ವಾನಿಸಿ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾರೆ.

ಪಂ. ನೀಲಕಂಠ ಬುವಾ ಆಲೂರಮಠ ಇವರು ಗ್ವಾಲಿಯರ ಘರಾಣೆಯ ಸಂಗೀತ ದಿಗ್ಗಜರು. ಇವರ ಪೂರ್ವಜರು ಆಗಿನ ಧಾರವಾಡ ಜಿಲ್ಲೆಯ ಹೊಳೆಆಲೂರಿನವರು. ವ್ಯಾಪಾರ ಮಾಡುತ್ತ ಮಿರಜನಲ್ಲಿಯೇ ಖಾಯಂ ಆಗಿ ನೆಲೆಗೊಂಡರು. ಇವರ ಶಿಷ್ಯರಲ್ಲಿ ಗಾನಯೋಗಿ ಪಂ. ಪಂಚಾಕ್ಷರಿ ಗವಾಯಿಗಳು ಮತ್ತು ಪಂ. ಮಲ್ಲಿಕಾರ್ಜುನ ಮನ್ಸೂರ ಇವರು ನಾಡಿನ ತುಂಬೆಲ್ಲಾ ಖ್ಯಾತಿಯನ್ನು ಪಡೆದುಕೊಂಡಿದ್ದಾರೆ. ಪಂ. ಪಂಚಾಕ್ಷರಿ ಗವಾಯಿಗಳು ಮೊದಲು ಕರ್ನಾಟಕೀ ಸಂಗೀತವನ್ನು ಅಭ್ಯಾಸ ಮಾಡಿ, ನಂತರ ಹಿಂದೂಸ್ತಾನಿ ಸಂಗೀತವನ್ನು ಉ. ವಹೀದ್ ಖಾನ್, ಪಂ. ನೀಲಕಂಠ ಬುವಾ ಮಿರಜಕರ, ಪಂ. ರಾಮಕೃಷ್ಣಬುವಾ ವಝೆ ಮತ್ತು ಉ. ಇನಾಯತ ಹುಸೇನ ಖಾನ್ ಹೀಗೆ ಎಲ್ಲಾ ದಿಗ್ಗಜರಲ್ಲಿ ಪಂ. ಪಚಾಕ್ಷರಿ ಗವಾಯಿಗಳು ಸಂಗೀತವನ್ನು ಅಭ್ಯಾಸ ಮಾಡಿದ್ದಾರೆ. ಪಂ. ಪಂಚಾಕ್ಷರಿ ಗವಾಯಿಗಳು ಅನೇಕ ಶಿಷ್ಯವೃಂದವನ್ನು ಹೊಂದಿದ್ದರು. ಇವರ ಶಿಷ್ಯರಲ್ಲಿ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳು, ಪಂ. ಬಸವರಾಜ ರಾಜಗುರು, ಪಂ. ಸಿದ್ರಾಮ ಜಂಬಲದಿನ್ನಿ, ಪಂ. ಅರ್ಜುನಸಾ ನಾಕೋಡ ಮತ್ತು ಪಂ. ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿ ಇವರೆಲ್ಲರೂ ಧಾರವಾಡದಲ್ಲಿ ತಮ್ಮ ಸಂಗೀತವನ್ನು ಪಸರಿಸಿದ್ದಾರೆ. ಹಾಗೇ ಗಾನಯೋಗಿ ಶಿವಯೋಗಿ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರು ಅನೇಕ ಕಲಾವಿರನ್ನು

ತಯಾರು ಮಾಡಿದ್ದಾರೆ. ಅಂತಹ ಶಿಷ್ಯರಲ್ಲಿ ಪಂ. ಚಂದ್ರಶೇಖರ ಪುರಾಣಿಕಮಠ, ಪಂ. ಸೋಮನಾಥ ಮರಡೂರ, ಪಂ. ಎಮ್. ವೇಂಕಟೇಶಕುಮಾರ, ಪಂ. ಡಿ.ಕುಮಾರದಾಸ ಹೀಗೆ ಅನೇಕ ಶಿಷ್ಯ ಪ್ರಶಿಷ್ಯರ ಪಂರಪರೆಯು ಧಾರವಾಡದವರೆಗೂ ಬೆಳೆಯುತ್ತಿದೆ. ಅದೇ ರೀತಿ ತಬಲಾ ಕ್ಷೇತ್ರದಲ್ಲಿ ನಾಡಿನ ಹೆಸರಾಂತ ತಬಲಾ ವಾದಕರಾದ ಪಂ. ಬಸವರಾಜ ಬೆಂಡಿಗೇರಿ ಇವರು ಅಪಾರ ಶಿಷ್ಯವೃಂದವನ್ನು ಹೊಂದಿದವರು ಅವರಲ್ಲಿ ಪಂ. ರಘುನಾಥ ನಾಕೋಡ, ಪಂ. ನಂದಿಕೇಶ್ವರ ಗುರವ, ಶ್ರೀ ಸುರೇಶ ನಿಡಗುಂದಿ ಇನ್ನೂ ಅನೇಕ ತಬಲಾ ಶಿಷ್ಯರು ಇದ್ದಾರೆ. ಹಾಗೇ ಪಂ. ಶೇಷಗಿರಿ ಹಾನಗಲ್, ಪಂ. ರಾಜಗೋಪಾಲ ಕಲ್ಲೂರಕರ, ಪಂ. ಗಿರೀಶ ಆವಟೆ, ಪಂ. ರವೀಂದ್ರ ಯಾವಗಲ್, ಪಂ. ಶಾಂತಲಿಂಗ ದೇಸಾಯಿಕಲ್ಲೂರ ಮತ್ತು ಯುವ ತಬಲಾ ವಾದಕರಲ್ಲಿ ಡಾ. ರವಿಕಿರಣ ನಾಕೋಡ, ಶ್ರೀ ಶ್ರೀಧರ ಮಾಂಡ್ರೆ ಹೀಗೆ ಅನೇಕ ತಬಲಾ ಕಲಾವಿದರು ಧಾರವಾಡ ಜಿಲ್ಲೆಯ ಪರಂಪರೆಯನ್ನು ಬೆಳೆಸುವ ನಿಟ್ಟಿನಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದಾರೆ.

**ಪಂ.ಬಸವರಾಜ ಬೆಂಡಿಗೇರಿ**

ಉ. ಮೆಹಬೂಬ್ ಖಾನ್ ರಿಂದ ತಬಲಾ ಶಿಕ್ಷಣ ಪಡೆದುಕೊಂಡಿದ್ದಾರೆ. ಧಾರವಾಡ ಆಕಾಶವಾಣಿಯ ನಿಲಯದ ಕಲಾವಿದರಾಗಿ ಸೇವೆಸಲ್ಲಿಸಿದ್ದಾರೆ. ಶ್ರೀ ವಿ. ಆರ್. ದೇವಧರರವರ ಇಂಡಿಯನ್ ಮ್ಯೂಜೀಕ್ ಸ್ಕೂಲ್‌ನಲ್ಲಿ ತಬಲಾ ಶಿಕ್ಷಕರಾಗಿ ಕಾರ್ಯನಿರ್ವಹಿಸಿದ್ದಾರೆ. 1961 ರಿಂದ 1988 ನೇ ಇಸ್ವಿಯಲ್ಲಿ ಕ.ವಿ.ವಿ. ಸಂಗೀತ ಮಹಾವಿದ್ಯಾಲಯದಲ್ಲಿ ತಬಲಾ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿದ್ದಾರೆ.

**ಪಂ. ಶೇಷಗೀರಿ ಹಾನಗಲ್**

ಪಂ.ಶೇಷಗಿರಿ ಹಾನಗಲ್ ಅವರು ಪುಣೆಯ ಲಾಲ್‌ಜಿ ಗೋಖಲೆ ಹಾಗೂ ಮುಂಬೈಯ ಇಂದೋರಕರ್ ಅವರಲ್ಲಿ ತಬಲಾ ಶಿಕ್ಷಣ ಪಡೆದುಕೊಂಡಿದ್ದಾರೆ.

**ಪಂ.ಗಿರೀಶ ಆವಟೆ**

ಕ.ವಿ.ವಿ. ಸಂಗೀತ ಮಹಾವಿದ್ಯಾಲಯದಲ್ಲಿ ತಬಲಾ ಪ್ರಾಧ್ಯಪಕರಾಗಿ ಸೇವೆಸಲ್ಲಿಸಿದ್ದಾರೆ.

**ಪಂ. ರವೀಂದ್ರ ಯಾವಗಲ್**

ಮೂಲತಃ ಹುಬ್ಬಳ್ಳಿಯವರಾದ ಪಂ. ರವೀಂದ್ರ ಯಾವಗಲ್ ಅವರು ತಮ್ಮ ತಬಲಾ ಶಿಕ್ಷಣವನ್ನು ಪಂ. ವೀರಣ್ಣ ಕಾಮಕರ ಹಾಗೂ ಪಂ. ಶೇಷಗೀರಿ ಹಾನಗಲ್ ಅವರಲ್ಲಿ ಪಡೆದುಕೊಂಡಿದ್ದಾರೆ.

## ರೆಫೆರೆನ್ಸಸ್


1. ತಬಲಾ ವಾದನ ದರ್ಪಣ – ಪಂ. ಸಂಜೀವ ಯು. ಪೋತದಾರ
2. ತಾಲ ದರ್ಶಿನಿ – ಡಾ. ಎ. ಎಲ್. ದೇಸಾಯಿ
3. ತಬಲಾ ವಾದನ ಶಾಸ್ತ್ರ ಅವನದ್ಧ – ಪಂ. ರಾಜಗೋಪಾಲ ಕಲ್ಲೂರಕರ್
4. ತಾಲ ತರಂಗ – ಡಾ. ಎ. ಎಲ್. ದೇಸಾಯಿ
5. ಸ್ವರ–ಲಯ ಸುಮುಖ – ಶ್ರೀ ಕೃಷ್ಣಕುಮಾರ ಮೋಹನ ಕುಲಕರ್ಣಿ ಮತ್ತು ಶ್ರೀಮತಿ ಮುಕ್ತಾ ಕೆ. ಕುಲಕರ್ಣಿ